Reg. No. |  |  |  |  |  |  |  |  |  |

**BCMKAL 132**

**I Semester B.Com. Degree Examination, April 2021**
**(Choice Based Credit System)**
**(2020-21 Batches Onwards)**
**KANNADA LANGUAGE (Paper – I)**

Time : 3 Hours                                                                 Max. Marks : 80

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಸತ್ಯಶರಣೆ ಸಂಕಮ್ಮನ ಶೋಕಕ್ಕೆ ಕಾರಣವೇನು ? ಅದು ಕಾವ್ಯದಲ್ಲಿ ನಿರೂಪಣೆಗೊಂಡ ಬಗೆಯನ್ನು ನಿರೂಪಿಸಿರಿ.

**ಅಥವಾ**

ಕೃಷ್ಣನು ಕರ್ಣನಿಗೆ ಪಾಂಡವರ ಪಕ್ಷ ಸೇರುವಂತೆ ಆಮಿಷವೊಡ್ಡಿದ ಪ್ರಸಂಗವನ್ನು ವಿವರಿಸಿರಿ.

2) ಜರವಾ ಜನಾಂಗದ ಬದುಕು-ಪ್ರತಿರೋಧಗಳ ಕುರಿತು ಬರೆಯಿರಿ.

**ಅಥವಾ**

ಸೂರ್ಯನ ಸಂಕಥನವನ್ನು ಡಾ. ಬಿ. ಎ. ವಿವೇಕ ರೈ ಅವರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿರಿ.

3) 'ಏಕಲವ್ಯ' ನಾಟಕವು ಕಾಡು ಮತ್ತು ನಾಡಿನ ನಡುವೆ ನಡೆದ ಸಂಘರ್ಷದ ಕತೆ – ವಿವರಿಸಿರಿ.

**ಅಥವಾ**

ಕೌರವ-ಪಾಂಡವರ ಅನ್ಯಾಯದ ವಿರುದ್ಧ ಸಮರ ಸಾರುವ ಏಕಲವ್ಯನ ಪಾತ್ರ ಪರಿಚಯಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(3×5=15)**

1) ತೆಂಕಣಗಾಳಿಯು ಉಂಟು ಮಾಡಿದ ಅನಾಹುತಗಳನ್ನು ಕವಿ ಪಂಜೆಯವರು ಹೇಗೆ ಚಿತ್ರಿಸಿದ್ದಾರೆ ? ವಿವರಿಸಿರಿ.

**ಅಥವಾ**

'ಹೊಸಹಾಡು' ಕವನದ ಆಶಯವೇನು ?

2) ಅಬ್ದುಲ್ ಕಲಾಂ ಅವರ 'ಜ್ಞಾನ ಸಮಾಜ'ದ ಪರಿಕಲ್ಪನೆ ಏನು ?

**ಅಥವಾ**

ಆನ್‌ಲೈನ್ ಖರೀದಿಯಲ್ಲಿ ಗ್ರಾಹಕನಿಗಿರಬೇಕಾದ ಎಚ್ಚರಿಕೆಗಳೇನು ?

3) 'ಏಕಲವ್ಯ' ಅಶ್ವತ್ಥಾಮರ ಸಂಭಾಷಣೆಯ ಸಂದರ್ಭವನ್ನು ವಿವರಿಸಿರಿ.

**ಅಥವಾ**

ಕಡೆಗಣಿಸಲ್ಪಟ್ಟವರ ಬದುಕಿನ ಪ್ರತೀಕವಾಗಿ ಏಕಲವ್ಯನು ಹೇಗೆ ನಿರೂಪಿತನಾಗಿದ್ದಾನೆ ? ವಿವರಿಸಿರಿ.

III. ಕೆಳಗಿನ **ಒಂದು** ಪದ್ಯದ ಸಂದರ್ಭ ಸೂಚಿಸಿ ಅರ್ಥ ಸ್ವಾರಸ್ಯವನ್ನು ಬರೆಯಿರಿ. **(1×5=5)**

1) ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯಿತ್ತು।
ಕೊಂದಹರೆಂಬುದನರಿಯದೆ –
ಬೆಂದೊಡಲ ಹೊರೆಯ ಹೋಯಿತ್ತು
ಅದಂದೆ ಹುಟ್ಟಿತ್ತು, ಅದಂದೆ ಹೊಂದಿತ್ತು –
ಕೊಂದವರುಳಿದರೆ ಕೂಡಲಸಂಗಮದೇವಾ ?

**ಅಥವಾ**

ಮೀಂಗುಲಿಗನೆನಾಗಿಯುಮಣ
ಮಾಂ ಗುಣಮನೆ ಬಿಸುಟೆನಿಲ್ಲ ನಿಮಗಂಮಗನಾ
ದಂಗೆನಗೆ ಬಿಸುಡಲಕ್ಕುಮೇ
ನೀಂ ಗಳ ಪಂಬಲನೆ ಬಿಸುಡಿಮಿನ್ನೆನ್ನೆಡೆಯೊಳ್।

IV. ಅ) ಕೆಳಗಿನ **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2×4=8)**

1) ನೀನಿರೆ ಮತ್ತೆ ಪೆಱರ್ ನರೇಂದ್ರರೇ.

2) ಘಟಾ ಹೋದ್ರೂ ಹಟ ಬುಡ್ನಾರಿ ಅಂತಿಯಲ್ಲ.

3) ಹೊಗಳಿದವರೆನ್ನ ಹೊನ್ನ ಶೂಲದಲಿಕ್ಕಿದರೆಂಬೆ.

4) ಹಾಗೇ ಡಬ್ಬಿಯೊಳಗೆ ಹಿಟ್ಟು ಒತ್ತಿದಂತೆ ಒತ್ತಿ ಒತ್ತಿ ಗಟ್ಟಿ ಮಾಡುತ್ತೇವೆ.

ಆ) ಕೆಳಗಿನ **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×4=8)**

1) ಡಾ. ಬಿ. ಎ. ವಿವೇಕ ರೈ

2) ರಹಮತ್ ತರೀಕೆರೆ

3) ಎ.ಪಿ.ಜೆ. ಅಬ್ದುಲ್ ಕಲಾಂ

4) ಸ್ಮಾರ್ಟ್ ಯುಗ.

ಇ) ಕೆಳಗಿನ **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×4=8)**

1) ಶಬ್ದವೇದಿ

2) ಕುರುಕ್ಷೇತ್ರ

3) ಚಂದನ ಶೆಟ್ಟಿ

4) ಡಾ. ಸಿದ್ಧಲಿಂಗಯ್ಯ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. **(1×12=12)**

1) ಕನ್ನಡದ ಆದಿಕವಿ ಎಂದು ಯಾರನ್ನು ಕರೆಯಲಾಗಿದೆ ?

2) ಕರ್ಣನ ಹುಟ್ಟಿನ ರಹಸ್ಯವನ್ನು ದುರ್ಯೋಧನನಿಗೆ ತಿಳಿಸಿದ ದಿವ್ಯಜ್ಞಾನಿ ಯಾರು ?

3) 'ಸಾಫ್ಟ್‌ವೇರ್ ಮತ್ತು ಎಮ್ಮೆ' – ಕವನದ ಕರ್ತೃ ಯಾರು ?

4) 'ನಾವು ಹುಡುಗಿಯರೇ ಹೀಗೆ ...' ಕವನವನ್ನು ಬರೆದವರು ಯಾರು ?

5) 'ದ್ವೀಪಮಾಲೆಗಳ ನಾಡು' ಎಂದು ಪ್ರಸಿದ್ಧಿ ಪಡೆದ ನಾಡು ಯಾವುದು ?

6) ಜರ್ಮನಿಯ ಪ್ರಸಿದ್ಧ ಭಾಷಾ ತಜ್ಞ ಯಾರು ?

7) 'ಮನಿಮನೆ ಕಥೆ' ಇದು ಯಾರ ಕೃತಿ ?

8) 'ಅಗ್ನಿಯ ರೆಕ್ಕೆಗಳು' – ಇದು ಯಾರ ಆತ್ಮ ಕಥೆ ?

9) 'ಹೊಲೆಮಾದಿಗರ ಹಾಡು' – ಈ ಕವನ ಸಂಕಲನವನ್ನು ಬರೆದವರು ಯಾರು ?

10) ಏಕಲವ್ಯನ ಗುರು ಯಾರು ?

11) 'ಬೆರಳ್‌ಗೆ ಕೊರಳ್' ನಾಟಕದ ಕರ್ತೃ ಯಾರು ?

12) 'ಏಕಲವ್ಯನಿಗೆ ಹುಲಿಯಾಗಿ ಹೋಗಿ ಹೆಬ್ಬುಲಿಯಾಗಿ ಬಾ' – ಎಂದವರು ಯಾರು ?

---